2) 3 ಮತ್ತು 4 ನೇ ದರ್ಜೆ ನಿವೃತ್ತ ನೌಕರರ ಆತನ/ಆಕೆಯ ಪತಿ/ಪತ್ನಿ ವರ್ಷಕ್ಕೆ 1 ಪಾಸಿನಂತೆ 5 ವರ್ಷಗಳವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳು ಸಂಚರಿಸುವ ಯಾವುದೇ ಸ್ಥಳಗಳಿಗೆ ಪ್ರಯಾಣಿಸಲು ಪಾಸುಗಳನ್ನು ನೀಡಲಾಗುತ್ತಿದೆ.

3) ಅವರ ಅವಲಂಬಿತ ಮಕ್ಕಳಿಗೆ ಶಾಲಾ/ಕಾಲೇಜಿಗೆ ಹೋಗಿ ಬರಲು 76 ಕಿಮೀ ವರೆಗೆ ಉಚಿತ ಬಸ್ ಪಾಸ್ ನೀಡಲಾಗಿದೆ.

ಇ) ಹೌದು

ಈ) ಉದ್ಭವಿಸುವುದಿಲ್ಲ.

1915 (2465) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರದ ಉಪ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ವಾಪಸ್ಸು ಕಳಿಸಲಾಗಿರುವುದರಿಂದ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ನಿಯೋಜನೆಯನ್ನು ರದ್ದುಪಡಿಸಿ ಖಾಯಂ ಸಿಬ್ಬಂದಿಯನ್ನು ನೇಮಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) :

ಅ) ಇಲ್ಲ, ಹಿರಿಯ ಮೋಟಾರು ವಾಹನ ನಿರೀಕ್ಷಕರೊಬ್ಬರು ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿ, ಸಾಗರದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ನಿಯೋಜನೆಯನ್ನು ರದ್ದುಗೊಳಿಸಿರುವುದಿಲ್ಲದ ಕಾರಣ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ತೊಂದರೆಯಾಗಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಜರೂರು ಕ್ರಮ ಕೈಗೊಳ್ಳಲಾಗುವುದು.

1917 (2459) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :– ಮಾನ್ಯ ಗೃಹ, ಕಾನೂನು ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಯಾವ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಎಷ್ಟು ವಿಚಾರಣಾ ಆಯೋಗಗಳನ್ನು ನೇಮಕ ಮಾಡಲಾಗಿದೆ (ತನಿಖಾ ಆಯೋಗಗಳ ಪೂರ್ಣ ವಿವರಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಆಯೋಗಗಳು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿವೆ, ಈ ವರದಿಯ ವಿವರಗಳೇನು;

ಇ) ಈ ವರದಿಗಳ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಈ) ಇದಕ್ಕಾಗಿ ವೆಚ್ಚ ಮಾಡಲಾದ ಒಟ್ಟು ಹಣವೆಷ್ಟು;

ಉ) ಈ ಪೈಕಿ ಯಾವ ಯಾವ ಆಯೋಗಗಳನ್ನು ರದ್ದುಪಡಿಸಲಾಗಿದೆ;

ಊ) ರದ್ದುಪಡಿಸಲು ಕಾರಣಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆಗೆ ಯಾವುದೇ ವಿಚಾರಣಾ ಆಯೋಗಗಳನ್ನು ನೇಮಕ ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ

1919 (1738) ಶ್ರೀ ಹೊನ್ನಾಳಿ ಜಬ್ಬಾರ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06 ಮತ್ತು 2006–07 ನೇ ಸಾಲಿನಲ್ಲಿ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯು ಗಳಿಸಿದ ಆದಾಯ ಮತ್ತು ಅನುಭವಿಸಿದ ನಷ್ಟ ಎಷ್ಟು;

ಆ) ಈ ಸಂಸ್ಥೆಗೆ ಮಂಜೂರು ಮಾಡಿದ ಹೊಸ ಬಸ್ಸುಗಳ ಸಂಖ್ಯೆ ಎಷ್ಟು; (ಘಟಕವಾರು ವಿವರ ನೀಡುವುದು);